ಮೂಲ ದಾವಾ ಸಂಖ್ಯೆ.84/2017 ಪಿ ಡಬ್ಲ್ಯೂ 1

(ದಿನಾಂಕ 03-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನನ್ನ ಗಂಡ ದಾವಾಸ್ತಿಯನ್ನು ಸನ್ 2000 ಇಸ್ವಿಯಲ್ಲಿ ಖರೀದಿಸಿರಬಹುದು. ಆ ಸಮಯದಲಿಲ ನಮ್ಮ ಮನೆಯಲ್ಲಿ ಎಷ್ಟು ಧನಗಳು ಮತ್ತು ಎಮ್ಮೆಗಳಿದ್ದವೆಂದು ಅಂತಾ ಹೇಳಬಹುದು ಸಾಕ್ಷಿ ಮುಂದುವರೆದು 8 ಎಮ್ಮೆಗಳಿದ್ದವು ಧನಗಳು ಇರಲಿಲ್ಲವೆನ್ನುತ್ತಾರೆ. ಸದರಿ ಎಮೆಂಗಳಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅದರಿಂದ ಬರುವ ಹಾಲು, ಮೊಸರು ಮತ್ತು ಬೆಣ್ಣೆಯನ್ನು ಮಾರಾಟ ಮಾಡುತ್ತಿದ್ದೆವು. ಸದರಿ ಹಾಲು ಮಾರಾಟ ಮಾಡುತಿತದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಹಾಲನ್ನು ನಾವು ಹೋಟೆಲ್ ಗಳಿಗೆ ಕೊಡುತ್ತಿದ್ದೆವು. ಆ ಸಮಯದಲ್ಲಿ ನಮ್ಮ ಊರಿನಲ್ಲಿ ಡೈರಿ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಯಾವುದೇ ರೀತಿಯಿಂದ ಹಣದ ಸಹಾಯವನ್ನು ದಾವಾಸ್ತಿ ಖರೀದಿಸುವ ಸಮಯದಲ್ಲಿ ನನ್ನ ಗಂಡನಿಗೆ ಮಾಡಿಲ್ಲ, ದಾವಾಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಪಿ-16 ದಾಖಲೆಯಲ್ಲಿ ಏನು ಬರೆದಿರುತ್ತಾರೆನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಹೆಚ್ ಬಿ ಹಳ್ಳಿಯಲ್ಲಿ ಮಾಡಿಸಿರುತ್ತೇನೆ. ಸದರಿ ದಾಖಲೆಯನ್ನು ಯಾರು ಕಂಪ್ಯೂಟರ್ ಮಾಡಿದರೆನ್ನುವುದು ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಎಷ್ಟು ವರ್ಷದ ಹಿಂದೆ ಮಾಡಿಸಿರುತ್ತಾರಂತಾ ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲೆಯನ್ನು ನನ್ನ ಗಂಡ ಮಾಡಿಸಿರುತ್ತಾರೆ ಅದರಲ್ಲಿ ಏನು ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ ವಕೀಲರ ಮೂಲಕ ಮಾಡಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ಹೇಳಿದ ನಂತರ ವಕೀಲರು ತಯಾರಿಸಿರುತ್ತಾರೆ ನಂತರದಲ್ಲಿ ನಾನು ದಾವೆ ದಾಖಲಿಸಿರುತ್ತೇನೆ. ಈ ದಾವೆಯನ್ನು ದಾಖಲಿಸಿದ ವಕೀಲರು ಸದರಿ ದಾಖಲೆಯನ್ನು ಮಾಡಿಸಿರುತ್ತಾರೆ.

ಗುರುಬಸಮ್ಮ ಇವರಿಗೆ ಜಮೀನು ಮಾರಾಟ ಮಾಡುವ ಸಮಯದಲ್ಲಿ ನೀವು ತಕರಾರು ಮಾಡಿದ್ರಾ ಎಂದರೆ ನನಗೆ ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಗುರುಬಸಮ್ಮ ಇವರಿಗೆ ಜಮೀನನ್ನು 8-9 ವರ್ಷದ ಹಿಂದೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟದಿಂದ ಬಂದ ಹಣದಿಂದ ನಾವು ನಮ್ಮ ಮನೆಯ ಖರ್ಚು ಮತ್ತು ಸಾಲಗಳನ್ನು ತೀರಿಸಿಕೊಂಡಿರುತ್ತೇವೆಂದರೆ

ಸರಿಯಲ್ಲ. ನನ್ನ ಗಂಡ ದಾವಾಸ್ತಿಯ ಮೇಲೆ ಬ್ಯಾಂಕಿನಲ್ಲಿ ಅಥವಾ ಬೇರೆಯವರ ಬಳಿ ಸಾಲ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ಪರ ದಾಖಲೆಗಳನ್ನು ನಾನೇ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ಪಹಣಿ ದಾಖಲೆಗಳಲ್ಲಿ ಗ್ರಾಮೀಣ ಬ್ಯಾಂಕ್ ಮೋರಿಗೇರಿ ಇವರಲ್ಲಿ ರೂ.50 ಸಾವಿರ ಸಾಲಕ್ಕಾಗಿ ನನ್ನ ಗಂಡ ಅಡಮಾನಪತ್ರ ಬರೆದುಕೊಟ್ಟಿರುತ್ತಾರೆನ್ನುವ ಬಗ್ಗೆ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ನನ್ನ ಗಂಡ ಮನೆಯ ಸಾಲ ಮತ್ತು ಬ್ಯಾಂಕಿನ ಸಾಲಗಳನ್ನು ಮರುಪಾವತಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಜಮೀನು ನಮಗೆ ಅನುಕೂಲವಿಲ್ಲದೇ ಇರುವುದರಿಂದ ನಮ್ಮ ಕುಟುಂಬದ ಅಡಚಣೆ ಸಲುವಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ.

ದಾವಾ 2 ಎಕರೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ. ದಾವಾಸ್ತಿಯಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದರು ಮತ್ತು ಅದನ್ನು ಅವರು ಸೋಲಾರ್ ಪ್ಲಾಂಟಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ಸಂಪೂರ್ಣವಾಗಿ ಬೇಲಿ ಹಾಕಿ ಅಲ್ಲಿ ಸೋಲಾರ್ ಪ್ಲಾಂಟ್ ಮಾಡಿದ್ದಾರೆಂದರೆ ಸರಿ. ದಾವಾಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿ ನನ್ನ ಗಂಡ ಅವರಿಗೆ ದಾವಾಸ್ತಿಯ ಸ್ವಾಧೀನವನ್ನು ಕೊಟ್ಟಿರುತ್ತಾನೆಂದರೆ ಸರಿ. 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ದಾವಾಸ್ತಿಯ ಸಾವಧೀನವನ್ನು ಕೊಟ್ಟಿದ್ದು 3 ನೇ ಪ್ರತಿವಾದಿಯು ಸೋಲಾರ್ ಪ್ಲಾಂಟಿಗಾಗಿ ಮಾರಾಟ ಮಾಡಿದ್ದಾರೆಂದರೆ ಸರಿ. ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹಾ ಪ್ರತಿವಾದಿ ನಂ.2 ಮತ್ತು 3 ರವರಿಂದ ಹೆಚ್ಚಿನ ಹಣವನ್ನು ಪಡೆಯಬೇಕೆನ್ನುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನ್ಯಾಯಾಲಯದ ಪ್ರತಿ ಮುದ್ದತ್ತಿಗೂ ನನ್ನ ಗಂಡ 1 ನೇ ಪ್ರತಿವಾದಿ ನನಗೆ ಕರೆದುಕೊಂಡು ಬರುತ್ತಾರೆ ನಾನು ಮತ್ತು ಅವರು ಸೇರಿ ನ್ಯಾಯಾಲಯದಲ್ಲಿ ಹಾಜರಾಗುತ್ತೇವೆಂದರೆ ಸರಿ. ಕಾನೂನುಬದ್ಧವಾಗಿ ಕಾನೂನುಬದ್ಧವಾಗಿ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ನಾನು ಮತ್ತು ನನ್ನ ಗಂಡ 1 ನೇ ಪ್ರತಿವಾದಿ ಮಿಲಾಪಿಯಾಗಿ 2 ಮತ್ತು 3 ನೇ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ನ್ಯಾಯಾಲಯಕ್ಕೆ ದಾಖಲಿಸಿ ಅದಕ್ಕನುಗುಣವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ